ಬುಧವಾರ, ಅಕ್ಟೋಬರ್ 31, 2018 | ₹ 5.00
www.prajavani.net
/prajavani.net
# ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

CENTRAL LIBRARY

ಮಿಡ್‌ನೈಟ್ ಮ್ಯಾರಥಾನ್
ಬೆಂಗಳೂರಿನಲ್ಲಿ ಮಂಗಳವಾರ ಟೆನಿಸ್ ಆಟಗಾರ ಮಹೇಶ್ ಭೂಪತಿ ಮತ್ತು ಬ್ಲೇಡ್ ರನ್ನರ್ ಶಾಲಿನಿ ಸರಸ್ವತಿ ಅವರು 'ಬೆಂಗಳೂರು ಮಿಡ್‌ನೈಟ್ ಮ್ಯಾರಥಾನ್–2018'ರ ಪೋಷಾಕು ಅನಾವರಣಗೊಳಿಸಿದರು

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಅಂತರ ಕಾಲೇಜು ಅಥ್ಲೆಟಿಕ್ ಕ್ರೀಡಾಕೂಟಕ್ಕೆ ತೆರೆ

# ಆಳ್ವಾಸ್‌ಗೆ ಸಮಗ್ರ ವೀರಾಗ್ರಣಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ (ವಿಟಿಯು) 21ನೇ ಅಂತರ ಕಾಲೇಜು ಅಥ್ಲೆಟಿಕ್ ಕ್ರೀಡಾಕೂಟದಲ್ಲಿ ಮೂಡುಬಿದಿರೆಯ ಆಳ್ವಾಸ್ ಕಾಲೇಜಿನ ವಿದ್ಯಾರ್ಥಿಗಳ ತಂಡ ಉತ್ತಮ ಪ್ರದರ್ಶನ ತೋರಿ ಸಮಗ್ರ ವೀರಾಗ್ರಣಿ ಪ್ರಶಸ್ತಿಗೆ ಭಾಜನವಾಯಿತು.

ಶ್ರೀ ಜಗದ್ಗುರು ಚಂದ್ರಶೇಖರನಾಥ ಸ್ವಾಮೀಜಿ ತಾಂತ್ರಿಕ ಸಂಸ್ಥೆ (ಎಸ್‌ಜೆಸಿಐಟಿ) ಕ್ರೀಡಾಂಗಣದಲ್ಲಿ ಅಕ್ಟೋಬರ್ 26ರಂದು ಆರಂಭಗೊಂಡಿದ್ದ ಕ್ರೀಡಾಕೂಟ ಸೋಮವಾರ ಕೊನೆಗೊಂಡಿತು.

ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ವಿಟಿಯು ಕುಲಪತಿ ಕರಿಸಿದ್ದಪ್ಪ, 'ವಿದ್ಯಾರ್ಥಿಗಳು ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ದೈಹಿಕ ಮತ್ತು ಮಾನಸಿಕವಾಗಿ ಸದೃಢರಾಗುತ್ತಾರೆ. ಆತ್ಮವಿಶ್ವಾಸದಿಂದ ಕ್ರೀಡೆಯಲ್ಲಿ ತೊಡಗಿಕೊಳ್ಳುವವರಿಗೆ ಗೆಲುವು ಕಟ್ಟಿಟ್ಟ ಬುತ್ತಿ. ಕ್ರೀಡೆ ಉತ್ತಮ ಆರೋಗ್ಯ ಕೂಡ ಸಿಗುತ್ತದೆ' ಎಂದು ಹೇಳಿದರು.

ಆದಿಚುಂಚನಗಿರಿ ಚಿಕ್ಕಬಳ್ಳಾಪುರ ಶಾಖಾ ಮಠದ ಮಂಗಳನಾಥ ಸ್ವಾಮೀಜಿ ಮಾತನಾಡಿ, 'ವಿದ್ಯಾರ್ಥಿಗಳು ಹೆಚ್ಚೆಚ್ಚು ಓದಬೇಕು. ಜೀವನದಲ್ಲಿ ಶಿಸ್ತನ್ನು ಅಳವಡಿಸಿಕೊಳ್ಳಬೇಕು. ಉತ್ತಮ ಕ್ರೀಡಾಪಟುಗಳಾಗಿ ದೇಶಕ್ಕೆ ಹಿರಿಮೆಯನ್ನು ತಂದು ಕೊಡಬೇಕು' ಎಂದು ತಿಳಿಸಿದರು.

ವಿಟಿಯು ದೈಹಿಕ ಶಿಕ್ಷಣ ನಿರ್ದೇಶಕ ಆರೀಫ್ ಅಲಿಖಾನ್, ಬಿಜಿಎಸ್ ಶಿಕ್ಷಣ ಸಂಸ್ಥೆಗಳ ಮುಖ್ಯ ಆಡಳಿತಾಧಿಕಾರಿ ಎನ್.ಶಿವರಾಮರೆಡ್ಡಿ, ಕಾಲೇಜಿನ ಪ್ರಾಂಶುಪಾಲ ಕೆ.ಎಂ.ರವಿಕುಮಾರ್, ಬಿಜಿಎಸ್ ವರ್ಲ್ಡ್ ಕಾಲೇಜಿನ ಪ್ರಾಂಶುಪಾಲ ರಂಜಿತ್ ಕುಮಾರ್ ಮಂಡಲ್, ಎಸ್‌ಜೆಸಿಐಟಿ ರಿಜಿಸ್ಟ್ರಾರ್ ಜೆ.ಸುರೇಶ್ ಉಪಸ್ಥಿತರಿದ್ದರು.

**ಮುಖ್ಯಾಂಶಗಳು**

- ಅಡ್ಯಾರ್ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜು ತಂಡ ಪ್ರಥಮ
- ನಿಟ್ಟೆಯ ಎನ್‌ಎಂಎಎಂಟಿ ತಂಡ ದ್ವಿತೀಯ ಸ್ಥಾನಕ್ಕೆ ಭಾಜನ
- ಬೆಂಗಳೂರಿನ ಬಿಎಂಎಸ್‌ಸಿಇ ಕಾಲೇಜು ತಂಡ ತೃತೀಯ

**218 ಕಾಲೇಜು**

ಕ್ರೀಡಾಕೂಟದಲ್ಲಿ ವಿಟಿಯು ವ್ಯಾಪ್ತಿಗೆ ಒಳಪಡುವ 218ಕ್ಕೂ ಹೆಚ್ಚು ಎಂಜಿನಿಯರಿಂಗ್ ಕಾಲೇಜುಗಳ ಸುಮಾರು 1,750ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಕ್ರೀಡಾಕೂಟದಲ್ಲಿ ಸಮಗ್ರ ವೀರಾಗ್ರಣಿ ಪ್ರಶಸ್ತಿ ಪಡೆದ ಆಳ್ವಾಸ್ ಕಾಲೇಜು ತಂಡ

## ಅಶ್ವತ್ಥ್ ಗೌಡ, ಮೇಧಾ ಅತ್ಯುತ್ತಮ ಅಥ್ಲೀಟ್

ಬೆಂಗಳೂರಿನ ಕೆ.ಎಸ್.ಎಂಜಿನಿಯರಿಂಗ್ ಕಾಲೇಜಿನ ಜಿ ಅಶ್ವತ್ಥ್ ಗೌಡ ಬಾಲಕರ ವಿಭಾಗದಲ್ಲಿ ಮತ್ತು ಬೆಂಗಳೂರಿನ ಸರ್ಕಾರಿ ಎಸ್‌ಕೆಎಸ್‌ಜೆಟಿಐ ಕಾಲೇಜಿನ ವಿದ್ಯಾರ್ಥಿನಿ ಮೇಧಾ ಆರ್ ಕಾಮತ್ ಬಾಲಕಿಯ ವಿಭಾಗದಲ್ಲಿ 'ಅತ್ಯುತ್ತಮ ಅಥ್ಲೀಟ್' ಪ್ರಶಸ್ತಿಗೆ ಭಾಜನರಾದರು.

ಬಾಲಕರ ವಿಭಾಗದ ಅತ್ಯುತ್ತಮ ಪ್ರದರ್ಶನದಲ್ಲಿ ಅನುಕ್ರಮವಾಗಿ ಮೂಡುಬಿದಿರೆಯ ಆಳ್ವಾಸ್ ಕಾಲೇಜು, ಪುತ್ತೂರಿನ ವಿವೇಕಾನಂದ ಕಾಲೇಜು ಮತ್ತು ನಿಟ್ಟೆಯ ಎನ್‌ಎಂಎಎಂಟಿ ತಂಡ ಮೊದಲ ಮೂರು ಸ್ಥಾನಗಳನ್ನು ಪಡೆದವು. ಬಾಲಕಿಯರ ವಿಭಾಗದ ಅತ್ಯುತ್ತಮ ಪ್ರದರ್ಶನದಲ್ಲಿ ಅನುಕ್ರಮವಾಗಿ ಮಂಗಳೂರಿನ ಅಡ್ಯಾರ್ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜು, ನಿಟ್ಟೆಯ ಎನ್‌ಎಂಎಎಂಟಿ ತಂಡ, ಬೆಂಗಳೂರಿನ ಬಿಎಂಎಸ್‌ಸಿಇ ಕಾಲೇಜು ತಂಡ ಮೊದಲ ಮೂರು ಸ್ಥಾನಗಳನ್ನು ಪಡೆದವು.

THE NEW
INDIAN
EXPRESS
MANGALURU • WEDNESDAY • OCTOBER 31, 2018 • ₹6.00 • PAGES 18 • CITY EDITION

CENTRAL LIBRARY



## Sahyadri College athletic team wins prize

Mangaluru: The women's athletic team of Sahyadri College of Engg & Management, Mangaluru, won the overall Championship with 60 points in the 21st VTU athletic competition held at SJCIT, Chikaballapura recently. They also won and overall runner-up (combined men and women) with 70 points and second prize in March past.